**OS No**: 41/2020 **P.W**:1

## ದಿನಾಂಕ : 24.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು 2 ನೇ ಪ್ರತಿವಾದಿ ಪರ ಶ್ರೀ ಎ.ಎಸ್. ವಕೀಲರಿಂದಃ-**

2015 ನೇ ಇಸವಿಯಲ್ಲಿ ನೀವು ಬ್ಯಾಂಕುಗಳಲ್ಲಿ ಮತ್ತು ಬೇರೆ ಕಡೆಗಳಲ್ಲಿ ಎಷ್ಟು ಸಾಲ ಮಾಡಿರುತ್ತೀರಿ ಎಂದರೆ ಸಾಕ್ಷಿ 2015 ರಲ್ಲಿ ನಾನು ಯಾವುದೇ ಸಾಲಗಳನ್ನು ಮಾಡಿಲ್ಲ, ನನ್ನ ತಂದೆ ತೀರಿಕೊಂಡ ನಂತರ ಪಿ.ಎಲ್.ಡಿ. ಬ್ಯಾಂಕಿನಲ್ಲಿದ್ದ 1 ಲಕ್ಷ ಸಾಲವನ್ನು ನಾನು ಪಾವತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 2015 ರಲ್ಲಿ ನಿಮಗೆ ಎಷ್ಟು ಆಸ್ತಿ ಇತ್ತು ಎಂದರೆ ಸಾಕ್ಷಿ ನನಗೆ ಪಿತ್ರಾರ್ಜಿತವಾಗಿ 2 ವರೆ ಎಕರೆ ಆಸ್ತಿ ಬಂದಿದ್ದು, 2015 ರಲ್ಲಿ ನಾನು 7 ಎಕರೆ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಂಡಿಗನಹಳ್ಳಿ ಹೋಬಳಿ ಮಾಳೇನಹಳ್ಳಿ ಗ್ರಾಮದಲ್ಲಿ 7 ಎಕರೆ ಜಮೀನನ್ನು ನಾನು ಖರೀದಿ ಮಾಡಿರುತ್ತೇನೆ. ಮಾಳೇನಹಳ್ಳಿಯಲ್ಲಿ 7 ಎಕರೆ ಆಸ್ತಿಯನ್ನು ಯಾವ ತಿಂಗಳಿನಲ್ಲಿ ಖರೀದಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ.

ಈಗ ನಾನು ನೋಡುತ್ತಿರುವ ದಾಖಲಾತಿ ಎಸ್.ಎಂ. ದೊರೆಸ್ವಾಮಿಯವರ ಮರಣ ಪ್ರಮಾಣ ಪತ್ರದ ಧೃಢೀಕೃತ ನಕಲು ಎಂದರೆ ಸರಿ. ಸಾಕ್ಷಿ ಮರಣ ಪ್ರಮಾಣ ಪತ್ರದ ಧೃಢೀಕೃತ ನಕಲನ್ನು ನೋಡಿ ಗುರುತಿಸಿದ್ದರಿಂದ ಎಂ.ಎಸ್. ದೊರೆಸ್ವಾಮಿಯವರ ಮರಣ ಪ್ರಮಾಣ ಪತ್ರದ ಧೃಢೀಕೃತ ನಕಲನ್ನು ಅಭಿಮುಖವಾಗಿ ನಿ.ಡಿ. 1 ಎಂದು ಗುರುತಿಸಲಾಯಿತು. ದೊರೆಸ್ವಾಮಿ ಎಂದರೆ 1 ನೇ ಪ್ರತಿವಾದಿಯ ಗಂಡ. ದೊರೆಸ್ವಾಮಿಯ ಸಾವಿಗೆ ನಾನು ಹೋಗಿರುವುದಿಲ್ಲ. ದೊರೆಸ್ವಾಮಿ ತೀರಿಕೊಂಡರು ಎನ್ನುವ ವಿಷಯ ನನಗೆ ಆಗ ಗೊತ್ತಿರಲಿಲ್ಲ, ಜಮೀನಿನ ಮಾತುಕತೆಯಾದಾಗ ಗೊತ್ತಾಗಿರುತ್ತದೆ. ವಾದ ಪತ್ರದಲ್ಲಿ ಬರೆದ ವಿಷಯಗಳನ್ನು ಓದಿ ತಿಳಿದುಕೊಂಡು ನಾನು ವಾದ ಪತ್ರಕ್ಕೆ ಸಹಿ ಮಾಡಿರುತ್ತೇನೆ. ನನ್ನ ವಾದ ಪತ್ರದ 5 ನೇ ಪ್ಯಾರಾದಲ್ಲಿ ವಾದಿಯ ಕಡೆಯಿಂದ ಹೆಚ್ಚುವರಿ ಮುಂಗಡ ಹಣ 2 ಲಕ್ಷ ಹಣವನ್ನು ಪಡೆದುಕೊಂಡಿದ್ದು, ಹೆಚ್ಚುವರಿ ಖರೀದಿ ಕರಾರು ಪತ್ರಕ್ಕೆ 1 ನೇ ಪ್ರತಿವಾದಿ ಗಂಡ ಸಾಕ್ಷಿದಾರರೆಂದು ಸಹಿ ಹಾಕಿರುತ್ತಾರೆ ಎಂದು ಬರೆಸಿದ್ದು ಆ ವಿಷಯ ನಿಜ ಇರುತ್ತದೆಯಾ

**OS No**: 41/2020 **P.W**:1

ಎಂದರೆ ಸಾಕ್ಷಿ ವಾದ ಪತ್ರದಲ್ಲಿ ಆ ರೀತಿ ಬರೆದಿದ್ದು ಸತ್ಯ ಆದರೆ 1 ನೇ ಪ್ರತಿವಾದಿಯ ಗಂಡ ಆ ದಿನಾಂಕದಂದು ಇರಲಿಲ್ಲ, ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2015 ರಲ್ಲಿ ನಾನು ದಂಡಿಗನಹಳ್ಳಿ ಹೋಬಳಿಯ ಮಾಳೇನಹಳ್ಳಿ ಗ್ರಾಮದಲ್ಲಿ 7 ಎಕರೆ ಆಸ್ತಿಯನ್ನು 25 ಲಕ್ಷ ರೂಗಳಿಗೆ ಖರೀದಿ ಮಾಡಿರುತ್ತೇನೆ.

ನಾನು 2008 ರಿಂದ ಇಂಡಿಯನ್ ಆಯಿಲ್ ಡೀಲರ್ ಷಿಪ್ ತೆಗೆದುಕೊಂಡಿದ್ದೆ, ಮಾಳೇನಹಳ್ಳಿ ಗ್ರಾಮದಲ್ಲಿ 7 ಎಕರೆ ಆಸ್ತಿಯನ್ನು ಖರೀದಿ ಮಾಡಿದ್ದಾಗ ಆ ಡೀಲರ್ ಷಿಪ್ ಅನ್ನು ಕೊನೆಗೊಳಿಸಿ ಅದರಲ್ಲಿ ಬಂದಂತಹ ಹಣವನ್ನು ಆಸ್ತಿ ಖರೀದಿ ಮಾಡಲು ಉಪಯೋಗಿಸಿರುತ್ತೇನೆ. ನಾನು ಇಂಡಿಯನ್ ಆಯಿಲ್ ಡೀಲರ್ ಷಿಪ್ ಮಾಡುವ ಸಮಯದಲ್ಲಿ ವೈಯಕ್ತಿಕವಾಗಿ ಯಾವುದೇ ಆದಾಯ ತೆರಿಗೆಯನ್ನು ಪಾವತಿ ಮಾಡುತ್ತಿರಲಿಲ್ಲ, ಡೀಲರ್‌ಷಿಪ್‌ನವರೇ ಪಾವತಿ ಮಾಡುತ್ತಿದ್ದರು. ವರ್ಷಕ್ಕೆ ಸುಮಾರು 30 - 3 5 ಲಕ್ಷ ವಹಿವಾಟಾಗುತ್ತಿದ್ದು ಅದರಲ್ಲಿ ವರ್ಷಕ್ಕೆ ಆದಾಯ 10-12 ಲಕ್ಷ ಬರುತ್ತಿತ್ತು. 2014 - 15 ನೇ ಸಾಲಿನಲ್ಲಿ ವಾರ್ಷಿಕ ಆದಾಯ 3 ಲಕ್ಷಕ್ಕಿಂತ ಜಾಸ್ತಿ ಇರುವವರು ಆದಾಯ ತೆರಿಗೆ ರಿಟರ್ನ್ಸ್ ಅನ್ನು ಫೈಲ್ ಮಾಡುವ ನಿಯಮ ಇತ್ತು ಎನ್ನುವ ವಿಷಯ ನನಗೆ ಗೊತ್ತಿಲ್ಲ. ನಮ್ಮ ಆಡಿಟರ್ ಹೆಸರು ಶಿವಶಂಕರ್, ಅವರು ಹಾಸನದವರು. ಈಗ ನಿಮ್ಮ ಆಡಿಟರ್ ಯಾರು ಇರುತ್ತಾರೆ ಎಂದರೆ ಸಾಕ್ಷಿ ಈಗ ನಾನು ಯಾವುದೇ ವ್ಯಾಪಾರ ಮಾಡುತ್ತಿಲ್ಲ ಹೀಗಾಗಿ ಆಡಿಟರ್ ಪ್ರಶ್ನೆಯೇ ಬರುವುದಿಲ್ಲ ಎಂದು ನುಡಿಯುತ್ತಾರೆ. 2014 - 15 ರಲ್ಲಿ ಡೀಲರ್ ಷಿಪ್ ಮುಗಿಸಿದಾಗ ನಮ್ಮ ಆಡಿಟರ್ ಶಿವಶಂಕರ್ ರವರ ಬಳಿ ನಾನು ರಿಟರ್ನ್ ಫೈಲ್ ಮಾಡಿಸಿರುತ್ತೇನೆ. ಡೀಲರ್ ಷಿಪ್ ನಿಂದ ಬಂದಂತಹ ಹಣವನ್ನು ನಾನು ಮಾಳೇನಹಳ್ಳಿ ಗ್ರಾಮದಲ್ಲಿರುವ ಜಮೀನನ್ನು ಖರೀದಿ ಮಾಡುವ ಸಲುವಾಗಿ ಉಪಯೋಗಿಸಿದ್ದೇನೆ ಎನ್ನುವ ವಿಷಯವನ್ನು ನಾನು 2014 - 15 ನೇ ಸಾಲಿನ ಇನ್‌ಕಂ ಟ್ಯಾಕ್ಸ್ ರಿಪೋರ್ಟ್‌ನಲ್ಲಿ ಘೋಷಣೆ ಮಾಡಿರುವುದಿಲ್ಲ. 2015 ನೇ ಸಾಲಿನಲ್ಲಿ ನಾನು ಡೀಲರ್ ಷಿಪ್‌ನ ಎಲ್ಲಾ ಹಣವನ್ನು ಮಾಳೇನಹಳ್ಳಿ ಗ್ರಾಮದ ಜಮೀನು ಖರೀದಿಸುವ ಸಲುವಾಗಿ ಹಾಕಿದ್ದರಿಂದ ನನಗೆ ಆ ವರ್ಷ ಆರ್ಥಿಕ ಮುಗ್ಗಟ್ಟು ಆಗಿತ್ತು ಎಂದರೆ ಸರಿಯಲ್ಲ.

**OS No**: 41/2020 **P.W**:1

2015 - 16 ರಲ್ಲಿ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. 2015 ರಲ್ಲಿ ನಾನು ಮಾಳೇನಹಳ್ಳಿ ಗ್ರಾಮದಲ್ಲಿ ಜಮೀನು ಖರೀದಿಸುವಾಗ ಎಲ್ಲಾ ಹಣವನ್ನು ತೊಡಗಿಸಿದ್ದರಿಂದ ನನಗೆ ಬೇರೆ ಆಸ್ತಿ ಖರೀದಿಸಲು ಯಾವುದೇ ಹಣ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ : 10.07.2016 ರಂದು ಮತುಕತೆಯಾಯಿತು, ದಾಖಲಾತಿಗಳನ್ನು 1 ನೇ ಪ್ರತಿವಾದಿಯಿಂದ ತೆಗೆದುಕೊಂಡಿದ್ದು ಮತ್ತು ಇತರೆ ವಿಷಯಗಳ ಬಗ್ಗೆ ಈ ಹಿಂದಿನ ಪಾಟೀಸವಾಲಿನಲ್ಲಿ ಹೇಳಿರುವ ವಿಷಯವನ್ನು ನೀವು ಮನೆಗೆ ಹೋದ ನಂತರ ಮನವರಿಕೆ ಮಾಡಿಕೊಂಡರ ಎಂದರೆ ಸಾಕ್ಷಿ ಮನವರಿಕೆ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ : 10.07.2016 ಭಾನುವಾರ ಬರುತ್ತದೆ ಎಂದರೆ ಗೊತ್ತಿಲ್ಲ. ದೊರೆಸ್ವಾಮಿಯವರು ತೀರಿಕೊಂಡ ನಂತರ 1 ನೇ ಪ್ರತಿವಾದಿ ಚನ್ನರಾಯಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿ ವಾಸವಾಗಿದ್ದಾರೆ. ಈಗಲೂ ಸಹಾ 1 ನೇ ಪ್ರತಿವಾದಿ ಚನ್ನರಾಯಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿ ವಾಸವಾಗಿದ್ದಾರೆ.

ನಿಪಿ 1 ದಾಖಲಾತಿ ಆದಾಗ ನಾನು, ತಿರುಮಲೇಗೌಡ, 1ನೇ ಪ್ರತಿವಾದಿ, 1 ನೇ ಪ್ರತಿವಾದಿಯ ಅಣ್ಣ, ನಾಗರಾಜು ಹಾಗೂ ರಂಗ ಅವರು ಸೇರಿದ್ದೆವು. ನಾವೆಲ್ಲರೂ ಚನ್ನರಾಯಪಟ್ಟಣ ತಾಲ್ಲೂಕು ಕಚೇರಿ ಎದುರುಗಡೆ ಇರುವ ನನ್ನ ಸ್ನೇಹಿತ ಕೇಶವಮೂರ್ತಿ ಕಚೇರಿಯಲ್ಲಿ ಸೇರಿದ್ದೆವು. ನಾವೆಲ್ಲರೂ ಅಲ್ಲಿ ಮಧ್ಯಾಹ್ನ ಸುಮಾರು 1 - 2 ಗಂಟೆಯಲ್ಲಿ ಸೇರಿದ್ದೆವು. 16 ನೇ ತಾರೀಕು ಕ್ರಯಪತ್ರವಾಗಿದ್ದು, ಆ ದಿನ ಮಧ್ಯಾಹ್ನ ಎಲ್ಲರೂ ಸೇರಿದ್ದೇವು. ನಾವೆಲ್ಲರೂ ಆ ದಿನ ಸಂಜೆ 4.30 ಗಂಟೆಗೆ ಕೇಶವಮೂರ್ತಿಯವರ ಕಚೇರಿಯಲ್ಲಿ ಇದ್ದೆವು. ನಂತರ ಸಾಕ್ಷಿ 16 ನೇ ತಾರೀಖು 12.30 - 1 ಗಂಟೆಗೆ ಹೊಳೆನರಸೀಪುರದ ರಿಜಿಸ್ಟರ್ ಕಚೇರಿಗೆ ಬಂದಿದ್ದೇವು ಎಂದು ನುಡಿಯುತ್ತಾರೆ. ದಿನಾಂಕ : 16.07.2016 ರಂದು ಹೊಳೆನರಸೀಪುರ ಸಬ್ ರಿಜಿಸ್ಟ್ರಾರ್ ಕಚೇರಿಗೆ ವೆಂಡರ್ ಕೇಶವಮೂರ್ತಿ, ಸಾಕ್ಷಿದಾರರಾದ ತಿರುಮಲೇಗೌಡ, ನಾಗರಾಜು, ರಂಗಪ್ಪ, ನಾನು, 1 ನೇ ಪ್ರತಿವಾದಿ ಹಾಗೂ ಅವರ ಅಣ್ಣ ಬಂದಿದ್ದೇವು. ಸಾಮಾನ್ಯವಾಗಿ ಪತ್ರಗಳು ನೋಂದಣಿಯಾಗುವ ದಿನವೇ ಅದರ ಕರಡುಗಳನ್ನು ತಯಾರಿಸುತ್ತಾರೆ ಎಂದರೆ ಸಾಕ್ಷಿ ಆ ರೀತಿ ಏನಿಲ್ಲ ಮೊದಲು ಸಹಾ ಕರಡನ್ನು ತಯಾರಿಸುತ್ತಾರೆ

ಎಂದು ನುಡಿಯುತ್ತಾರೆ. ನಿಮ್ಮ ಆಸ್ತಿಗಳಿಗೆ ಸಂಬಂಧಪಟ್ಟಂತೆ ಮಾಡಿಕೊಂಡಂತಹ



ದಾಖಲಾತಿಗಳು ಸಹಾ ನೋಂದಣಿಯಾಗುವ ದಿನವೇ ತಯಾರಾಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಮೊದಲೇ ದಿನಾಂಕವನ್ನೆಲ್ಲಾ ಹಾಕಿ ತಯಾರು ಮಾಡಿಕೊಂಡು ನೋಂದಣಿ ಮಾಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿ ನಮೂದಿಸಿರುವ ದಿನಾಂಕ, ಆ ದಿನಾಂಕದಂದು ತಯಾರಿಸಿದ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿ 1 ರ ದಾಖಲಾತಿಯನ್ನು 1 ನೇ ಪ್ರತಿವಾದಿಯೇ ಆ ಪತ್ರವನ್ನು ಕೇಶವಮೂರ್ತಿಯವರ ಬಳಿ ತಯಾರಿಸಿಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯೇ ಕೇಶವಮೂರ್ತಿಯವರ ಬಳಿ ತಯಾರಿಸಿದ್ದ ಕರಾರು ಪತ್ರಕ್ಕೆ ಹಣವನ್ನು ಕೊಟ್ಟಿರುತ್ತಾರೆ. ನಿಪಿ 1 ರ 6 ನೇ ಪುಟದಲ್ಲಿ ಹೇಳಿರುವ 1,600/- ರೂಪಾಯಿಗಳನ್ನು ನಾನು ಪಾವತಿಸಿರುತ್ತೇನೆ ಎಂದು ಹೇಳುವ ಧೃಢೀಕರಣವು ತಪ್ಪಾ ಎಂದರೆ ಸಾಕ್ಷಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿಯ ಹಣವನ್ನು ನಾನು ಪಾವತಿಸಿರುತ್ತೇನೆ ಎಂದು ನುಡಿಯುತ್ತಾರೆ. ಹಣ ಕಟ್ಟಲು ಚಲನ್ ಅನ್ನು ದಿನಾಂಕ : 16.07.2016 ರಂದು ನಾನು ಜನರೇಟ್ ಮಾಡಿಸಿದ್ದೆ. ಚಲನ್ ಅನ್ನು ಎಲ್ಲಿ ಜನರೇಟ್ ಮಾಡಿಸಿರುತ್ತೇನೆ ಎಂದು ನೆನಪಿಲ್ಲ. ಚಲನ್ ಹಣವನ್ನು ಯಾವ ಬ್ಯಾಂಕಿನಲ್ಲಿ ಕಟ್ಟಿರುತ್ತೇನೆ ಎಂದು ನೆನಪಿಲ್ಲ. ನಿಪಿ 1 ದಾಖಲಾತಿ ದಿನಾಂಕ : 16.07.2016 ರಂದು ತಯಾರಾಗಿಲ್ಲ ಎಂದರೆ ಸರಿಯಲ್ಲ.

ಬೆಳಗಿನ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು

ಹೊಳೆನರಸೀಪುರ.



**OS No**: 41/2020 **P.W**:1

## ದಿನಾಂಕ : 24.09.2024 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು 2 ನೇ ಪ್ರತಿವಾದಿ ಪರ ಶ್ರೀ ಎ.ಎಸ್. ವಕೀಲರಿಂದಃ-**

ನಿಪಿ 1 ನೋಂದಣಿಯಾಗುವ ದಿವಸ ನಾನು ಚನ್ನರಾಯಪಟ್ಟಣ ಕೇಶವಮೂರ್ತಿ ಕಚೇರಿಗೆ ಹೋದೆ. ಕೇಶವಮೂರ್ತಿ ಕಚೇರಿಯಲ್ಲಿ ಯಾರು ಸಹಿ ಹಾಕಲಿಲ್ಲ. ಮಾತುಕತೆಯಾದಾಗ 1 ನೇ ಪ್ರತಿವಾದಿ ನನಗೆ ಅವರ ಯಾವುದೇ ಪಾಸ್ ಪೋರ್ಟ್ ಸೈಜ್ ಫೋಟೋಗಳನ್ನು ಕೊಟ್ಟಿರಲಿಲ್ಲ. ಸಾಮಾನ್ಯವಾಗಿ ಮಾತುಕತೆ ಒಂದು ಮೊತ್ತಕ್ಕೆ ಆದರೆ ನೋಂದಣಿ ಶುಲ್ಕವನ್ನು ಉಳಿಸುವ ಸಲುವಾಗಿ ರಿಜಿಸ್ಟ್ರೇಷನ್ ಒಂದು ಮೊತ್ತಕ್ಕೆ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಇರಬಹುದು ಆದರೆ ಆ ವಿಷಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮಾಳೇನಹಳ್ಳಿ ಜಮೀನನ್ನು 25 ಲಕ್ಷಕ್ಕೆ ಮಾತುಕತೆ ಮಾಡಿ ಅಷ್ಟೇ ಹಣಕ್ಕೆ ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತೇನೆ. ಆ ಆಸ್ತಿಗೆ ಸಂಬಂಧಪಟ್ಟಂತೆ ನಾನು ಕ್ರಯ ಪತ್ರ ಮಾಡಿಕೊಂಡಿರುತ್ತೇನೆ.

ನಾನು ಕೇಶವಮೂರ್ತಿಯವರ ಕಚೇರಿಗೆ ಹೋದಾಗ ಕ್ರಯದ ಕರಾರು ಪತ್ರ ತಯಾರಾಗಿತ್ತು. ನಿಪಿ 1 ರಲ್ಲಿಯ ಪುಟ ಸಂಖ್ಯೆ 2 ರಲ್ಲಿ ಬೆರಳಚ್ಚಿನಿಂದ ಟೈಪ್ ಮಾಡಿರುವ ಅಕ್ಷರಗಳನ್ನು ಎಲ್ಲಿ ಸೇರಿಸಿರುತ್ತೀರಿ ಎಂದರೆ ಸಾಕ್ಷಿ ಕೇಶವಮೂರ್ತಿಯವರ ಕಚೇರಿಯಲ್ಲಿಯೇ ಸೇರಿಸಿರುವುದಾಗಿ ನುಡಿಯುತ್ತಾರೆ. ಸದರಿ ಬೆರಳಚ್ಚಿನಿಂದ ಟೈಪ್ ಮಾಡಿ ಸೇರಿಸಲಾದ ಸಾಲುಗಳಿಗೆ ಸಹಿ ಹಾಕಿಲ್ಲ ಎಂದರೆ ಸರಿ. ನಿಪಿ 1 ರ 2 ನೇ ಪುಟದಲ್ಲಿ ಬೆರಳಚ್ಚಿನಿಂದ ಟೈಪ್ ಮಾಡಲಾದ ಸಾಲುಗಳನ್ನು ಸೇರಿಸಿದ್ದರ ಬಗ್ಗೆ ಆ ದಾಖಲಾತಿಯ ಕೊನೆ ಪುಟದಲ್ಲಾಗಲೀ ಅಥವಾ ಕೆಳಗೆಯಾಗಲೀ ಸೇರಿಸಿದ್ದರ ಬಗ್ಗೆ ಯಾವುದೇ ಹಿಂಬರಹ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಬಗ್ಗೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಟೈಪ್ ಮಾಡಿರುವ ಸಾಲುಗಳನ್ನು ನನ್ನ ಎದುರುಗಡೆಯೇ ಸೇರಿಸಿರುತ್ತಾರೆ. ನಿಪಿ 1 ರ 2ನೇ ಪುಟದಲ್ಲಿ ಬೆರಳಚ್ಚಿನಿಂದ ಟೈಪ್ ಮಾಡಲಾದ ಸಾಲುಗಳನ್ನು ನನ್ನ ಹೇಳಿಕೆಯ ಮೇರೆಗೆ ಸೇರಿಸಲಾಗಿದೆ.

**OS No**: 41/2020 **P.W**:1

ನಿಪಿ 1 ನೋಂದಣಿಯಾದ ನಂತರ ಇವತ್ತಿನವರೆಗೆ ಅದರ ಧೃಢೀಕೃತ ನಕಲನ್ನು ನೋಂದಣಿ ಕಚೇರಿಯಿಂದ ಪಡೆದಿರುತ್ತೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿರುವ ನಿಪಿ 1(ಬಿ) ಸಹಿಗೂ ನಿಪಿ 1(ಸಿ) ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ರಾಜೇಶ್ವರಿ ಎಂದು ಬರೆದ ಸಹಿಗಳಲ್ಲಿ **"ರಿ"** ಎಂಬ ಅಕ್ಷರವು ವ್ಯತ್ಯಾಸ ಇದೆ ಎಂದರೆ ಸರಿ ಇಲ್ಲ ಅದು 1 ನೇ ಪ್ರತಿವಾದಿಯ ಸಹಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ 1(ಎ) ಮತ್ತು 1(ಬಿ) ಸಹಿಗಳಲ್ಲೂ ಸಹಾ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಯಾವುದೇ ಕರಾರು ಪತ್ರಗಳಾದಲ್ಲಿ ಅವುಗಳನ್ನು ನೊಂದಣಿ ಮಾಡಿಸಿಕೊಳ್ಳಬೇಕು ಎನ್ನುವ ವಿಷಯದ ಬಗ್ಗೆ ನನಗೆ ಗೊತ್ತು ಎಂದರೆ ಸರಿ. ನಾನು ಯಾವುದೇ ಸಂಘ ಸಂಸ್ಥೆಗಳಲ್ಲಿ ನಿರ್ದೇಶಕ ಅಥವಾ ಸದಸ್ಯ ಎಂದು ಇರುವುದಿಲ್ಲ.

ನೀವು ವಿನಾಯಕ ವಿವಿದ್ದೋದ್ದೇಶ ಸಹಕಾರಿ ಸಂಘದಲ್ಲಿ ನಿರ್ದೇಶಕರಿರುತ್ತೀರೋ ಅಥವಾ ಸದಸ್ಯರಿರುತ್ತೀರೋ ಎಂದರೆ ಸಾಕ್ಷಿ ಯಾವುದು ಇರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಆಸ್ತಿಯನ್ನು ಖರೀದಿ ಮಾಡಿದಾಗ ಕ್ರಯಕ್ಕೆ ಪಡೆಯುವ ವ್ಯಕ್ತಿಯೇ ನೋಂದಣಿಯ ಶುಲ್ಕವನ್ನು ಕೊಡುತ್ತಾರೆ ಎನ್ನುವ ವಿಷಯ ಗೊತ್ತು ಎಂದರೆ ಸರಿ. ಅದೇ ರೀತಿ ಒಪ್ಪಂದ ಪತ್ರ, ದಾನ ಪತ್ರ ಅಥವಾ ಇತರೆ ಪತ್ರಗಳನ್ನು ಬರೆಸಿಕೊಳ್ಳುತ್ತಾರೋ ಅವರೇ ಸ್ಟಾಂಪ್ ಡ್ಯೂಟಿಯನ್ನು ಕೊಡುತ್ತಾರೆ ಎಂದರೆ ಸರಿ. ನಿಪಿ 1 ನ್ನು ಓದಿ ನೋಡಿ ಅದರಲ್ಲಿ ಬರೆದ ನಾವು, ನೀವು, ನಿಮಗೆ ಹಾಗೂ ನಿಮ್ಮ ಎನ್ನುವುದನ್ನು ಗಮನಿಸಿದಾಗ ನಿಪಿ 1 ದಾಖಲಾತಿಯನ್ನು ನನ್ನ ಸಮಕ್ಷಮವೇ ಬರೆದಿರುತ್ತಾರೆ ಎನ್ನುವ ಭಾವನೆ ಬರುತ್ತದೆ ಎಂದರೆ ಸಾಕ್ಷಿ ನನ್ನ ಸಮಕ್ಷಮ ಅದನ್ನು ಬರೆದಿಲ್ಲ, ಅದನ್ನು 1ನೇ ಪ್ರತಿವಾದಿ ಬರೆಸಿ ಇಟ್ಟಿದ್ದರು ಎಂದು ನುಡಿಯುತ್ತಾರೆ. ನಾನು 1 ನೇ ಪ್ರತಿವಾದಿ ದೋಖಾ ಮಾಡುವ ಉದ್ದೇಶದಿಂದ ನಿಪಿ 1 ನ್ನು ನಾನೇ ಸೃಷ್ಠಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ನ್ನು ನಾನೇ ತಯಾರಿಸಿಕೊಂಡು ನಂತರ ಅದರಲ್ಲಿ ಕ್ರಯಪತ್ರದ ಅವಧಿಯ ಬಗ್ಗೆ ಯಾವುದೇ ಒಕ್ಕಣಿಕೆ ಇಲ್ಲ ಎಂದು ಕಂಡುಬಂದಾಗ ನಾನೇ ನಿಪಿ 1 ರ 2 ನೇ ಪುಟದಲ್ಲಿ ಬೆರಳಚ್ಚಿನ ಸಾಲುಗಳನ್ನು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ 1 ರಲ್ಲಿ 3 ತಿಂಗಳ ಕಾಲಾವಧಿ ತೋರಿಸಿದ್ದು ಆ ಅವಧಿ ಮೀರಿದ ನಂತರ

**OS No**: 41/2020 **P.W**:1

ಲಿಖಿತವಾಗಿ ಪತ್ರವೇನಾದರೂ ಬರೆದಿರುತ್ತೀರ ಎಂದರೆ ಸಾಕ್ಷಿ ಪತ್ರ ಬರೆದಿಲ್ಲ, ಕೇವಲ ಫೋನ್ ಮಾಡಿ ಕೇಳಿದ್ದೆ ಎಂದು ನುಡಿಯುತ್ತಾರೆ.

ಫೋನ್ ಮಾಡಿದಾಗ ಕ್ರಯಪತ್ರದ ಬಗ್ಗೆ ಮಾತುಕತೆ ಮಾಡಿದ್ದು ಹಣದ ಬಗ್ಗೆ ಯಾವುದೇ ಮಾತುಕತೆ ಮಾಡಿಲ್ಲ. ನಿಪಿ 1 ಆದ ಸಮಯಕ್ಕೆ ಬ್ಯಾಂಕ್ ಮೂಲಕ ಹಣ ಕೊಡಲು ನಾನು ಪ್ರಯತ್ನ ಮಾಡಿಲ್ಲ, ನಗದು ರೂಪದಲ್ಲಿ ಹಣ ನೀಡಿರುತ್ತೇನೆ. ನಿಪಿ 1 ಆದಾಗ ನಾನು ಅದರಲ್ಲಿ ತೋರಿಸಿರುವಂತಹ 5 ಲಕ್ಷ ಹಣವನ್ನು 1 ನೇ ಪ್ರತಿವಾದಿಗೆ ಪಾವತಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರದಲ್ಲಿ ತೋರಿಸಿರುವ 5 ಲಕ್ಷ ಹಣವನ್ನು ಪಾವತಿಸದೇ ಇದ್ದುದ್ದರಿಂದ ನಿಪಿ 1 ರ 1 ನೇ ಪುಟದ ಹಿಂದೆ ಇರುವ **"ಬರೆದುಕೊಟ್ಟಿದ್ದಾಗಿ (ಮತ್ತು ಪೂರ್ಣ / ಭಾಗಶ: / ಪ್ರತಿಫಲ ರೂ... ... ... ... ... ... ..)"** ಎನ್ನುವ ಜಾಗವು ಖಾಲಿ ಬಿಡಲಾಗಿದೆ ಎಂದರೆ ಸರಿಯಲ್ಲ. ಹಣದ ವಿಚಾರದಲ್ಲಿ 1 ನೇ ಪ್ರತಿವಾದಿ ನನ್ನ ಮೇಲೆ ಇರುವ ಪೂರ್ತಿ ನಂಬಿಕೆಯನ್ನು ಕಳೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. 5 ಲಕ್ಷ ಹಣವನ್ನು ಬ್ಯಾಂಕಿನಿಂದ ತೆಗೆದ ಬಗ್ಗೆ ಅಥವಾ ಬ್ಯಾಂಕ್ ಮೂಲಕ ಕೊಡಲು ನಿಮಗೆ ಏನಾದರೂ ತೊಂದರೆ ಇತ್ತ ಎಂದರೆ ಸಾಕ್ಷಿ ತೆಂಗಿನ ಕಾಯಿ ಮಾರಿದ ಹಣ ನನ್ನ ಬಳಿ ಇತ್ತು ಅದೇ ಹಣವನ್ನು ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಇವತ್ತಿನವರೆಗೂ ನಾನು ನಿಪಿ 1 ರಲ್ಲಿರುವ 5 ಲಕ್ಷ ಹಣವನ್ನು ಪಾವತಿಸದೇ ಇದ್ದರು ಸಹಾ ದಾವಾ ಆಸ್ತಿಯನ್ನು ಹೇಗಾದರು ಮಾಡಿ ಧಕ್ಕಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರ 1 ನೇ ಪುಟದ ಹಿಂದೆ ಇರುವ **"ಬರೆದುಕೊಟ್ಟಿದ್ದಾಗಿ (ಮತ್ತು ಪೂರ್ಣ / ಭಾಗಶ: / ಪ್ರತಿಫಲ ರೂ... ... ... ... ... ... ..)"** ಖಾಲಿ ಜಾಗದ ಬಗ್ಗೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸಹಿ ಮಾಡುವ ಸಮಯಕ್ಕೆ ಸಬ್ ರಿಜಿಸ್ಟ್ರಾರ್ ರವರ ಗಮನಕ್ಕೆ ತರಲು ನಿಮಗೆ ಏನಾದರೂ ತೊಂದರೆ ಇತ್ತ ಎಂದರೆ ಸಾಕ್ಷಿ ಅದರ ಬಗ್ಗೆ ಸಬ್ ರಿಜಿಸ್ಟ್ರಾರ್ ಗೆ ಗೊತ್ತು ನಮಗೆ ಆ ವಿಷಯಗಳು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ದೋಖಾ ಮಾಡುವ ಉದ್ದೇಶದಿಂದ ನಗದು ರೂಪದಲ್ಲಿ 5 ಲಕ್ಷ ಕೊಟ್ಟಿರುತ್ತೇವೆ ಎಂದು

ಬುದ್ದಿವಂತಿಕೆಯಿಂದ ತೋರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.



**OS No: 41/2020** **P.W:1**

ಅಗ್ರಿಮೆಂಟ್‌ನಲ್ಲಿ ಹೇಳಿರುವ 3 ತಿಂಗಳ ಅವಧಿ ಮುಗಿದ ಮೇಲೆ ನಾನು 1 ನೇ ಪ್ರತಿವಾದಿಗೆ ಫೋನ್ ಮಾಡಿದ್ದು, ನಂತರ ವಾರಕ್ಕೆ ಒಂದು ಬಾರಿ ಪ್ರತಿವಾದಿ ಮನೆಗೆ ಹೋಗಿ ಕ್ರಯಪತ್ರದ ಬಗ್ಗೆ ವಿಚಾರಿಸಿರುತ್ತೇನೆ. ನಾನು 1ನೇ ಪ್ರತಿವಾದಿಯ ಮನೆಗೆ ಹೋಗಿ ವಿಚಾರಿಸಿದಾಗ ಅವರ ಮೇಲೆ ಅವಿಶ್ವಾಸ ಬಂದಿರುವುದಿಲ್ಲ. 3 ತಿಂಗಳಾದ ನಂತರ ಕ್ರಯಪತ್ರವನ್ನು ನೋಂದಣಿ ಮಾಡಿಸುವ ಸಲುವಾಗಿ ವಿಚಾರಣೆ ಮಾಡಲು ಸಬ್ ರಿಜಸ್ಟ್ರಾರ್ ಕಚೇರಿಗೆ ಹೋಗಿದ್ದೆವು. ಈ ವಿಷಯವನ್ನು ನಾನು ನನ್ನ ದಾವೆಯಲ್ಲಿ ಹೇಳಿಲ್ಲ. 2016 ರಿಂದ 2018 ರ ಅವಧಿಯಲ್ಲಿ ನೀವೇನಾದರೂ 1 ನೇ ಪ್ರತಿವಾದಿ ಕ್ರಯಪತ್ರ ಬರೆದುಕೊಡುವಂತೆ ನೋಟಿಸ್ ಕೊಟ್ಟಿರುತ್ತೀರ ಎಂದರೆ ಸಾಕ್ಷಿ ಕೇಳಿಕೊಂಡಿದ್ದೆ ಆದರೆ ಅವರೇ ಕಾಗದ ಪತ್ರಗಳನ್ನು ಸರಿ ಮಾಡಿ ಕ್ರಯಪತ್ರ ಮಾಡಿಕೊಡುತ್ತೇನೆ ಎಂದು ಸಮಯ ತೆಗೆದುಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

ಬ್ಯಾಂಕ್‌ಗಳಲ್ಲಿ ಆಸ್ತಿಗಳನ್ನು ಆಧಾರ ಮಾಡುವುದರ ಬಗ್ಗೆ ನನಗೆ ಮಾಹಿತಿ ಇದೆ. ಆಧಾರ ಮಾಡಿಕೊಳ್ಳುವಾಗ ಬ್ಯಾಂಕಿನಲ್ಲಿ ಆಸ್ತಿಗೆ ಸಂಬಂಧಪಟ್ಟಂತೆ ಮೆಮೋರಂಡಮ್ ಆಫ್ ಟೈಟಲ್ ಡೀಡ್ಸ್ ರಿಜಿಸ್ಟರ್ ಮಾರ್ಟ್‌ಗೇಜ್ ಡೀಡ್‌ಗಳ ಬಗ್ಗೆ ನನಗೆ ಮಾಹಿತಿ ಇದೆ. ಮಾರ್ಟ್‌ಗೇಜ್ ಮಾಡಬೇಕಾದರೆ ಬ್ಯಾಂಕಿನಿಂದ ಸ್ಟಾಂಪ್ ಪೇಪರ್‌ಗಳನ್ನು ತರಿಸಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಧಾರಕ್ಕಾಗಿ ಬ್ಯಾಂಕಿನಿಂದ ಸ್ಟಾಂಪ್ ಪೇಪರ್ ತರಿಸಿಕೊಳ್ಳುವ ವಿಚಾರ ನನಗೆ ಗೊತ್ತಿದ್ದರು ಸಹಾ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ರ ಮುಖಪುಟದ ಡಾಕುಮೆಂಟ್‌ನ ವಿವರಣೆಯ ಕಲಂನಲ್ಲಿ "**ಆರ್ಟಿಕಲ್ 6 – ಅಗ್ರಿಮೆಂಟ್ ರಿಲೇಟಿಂಗ್ ಟು ಡೆಪಾಸಿಟ್ ಆಫ್ ಟೈಟಲ್ ಡೀಡ್**" ಎಂದು ಬರೆದಿದೆ ಎಂದರೆ ಸಾಕ್ಷಿ ಆ ಬಾಂಡ್ ಅನ್ನು 1 ನೇ ಪ್ರತಿವಾದಿಯೇ ತಂದಿದ್ದರು ಎಂದು ನುಡಿಯುತ್ತಾರೆ. ನಿಪಿ 2 ರ ಮುಖಪುಟದಲ್ಲಿ ಬರೆದ ಎಲ್ಲಾ ವಿವರಣೆಗಳನ್ನು ನಾನು ನೋಡಿ ಆ ಪತ್ರವನ್ನು ಬರೆಸಿಕೊಂಡಿರುತ್ತೇನೆ. ನಿಪಿ 2 ದಾಖಲಾತಿಯನ್ನು ಯಾರು ಯಾರು ಮಾಡಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ ನಾನು, ದೊರೆಸ್ವಾಮಿ, ಕೇಶವಮೂರ್ತಿ, 1ನೇ ಪ್ರತಿವಾದಿ, ಗೋಪಾಲ ಕೃಷ್ಣ ಹಾಗೂ 1ನೇ ಪ್ರತಿವಾದಿಯ ಅಣ್ಣ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ 2

ರಲ್ಲಿಯ ವಕ್ಕಣಿಕೆಯಲ್ಲಿ ನವೆಂಬರ್ ಹಾಗೂ 5 ಎಂದು ಬರೆದ ಶಬ್ದಗಳು ತಿದ್ದುಪಡಿಯಾಗಿದೆ



ಎಂದರೆ ಸಾಕ್ಷಿ ಹೌದು ಆದರೆ ಅದರ ಮೇಲೆ ಸಹಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ 2 ನ್ನು ಬರೆದ ದಿನ 1ನೇ ಪ್ರತಿವಾದಿ ಹಾಜರಿದ್ದರು. ತಿದ್ದುಪಡಿಗೆ 1 ನೇ ಪ್ರತಿವಾದಿಯ ಸಹಿ ಪಡೆದಿಲ್ಲ ಏಕೆಂದರೆ ನನ್ನೊಬ್ಬನ ಸಹಿ ಸಾಕು ಎಂದು ಹೇಳಿದ್ದಕ್ಕೆ ನನ್ನೊಬ್ಬನ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಕಾಲಾವಧಿ ಮುಗಿದಿದೆ ಎನ್ನುವ ವಿಷಯ ನನಗೆ ಗೊತ್ತಿದ್ದರು ಸಹಾ ಹೇಗಾದರು ಮಾಡಿ ಅಗ್ರಿಮೆಂಟ್‌ನ ಅವಧಿಯನ್ನು ಮುಂದುವರೆಸಿಕೊಂಡು ಹೋಗಬೇಕು ಎನ್ನುವ ಉದ್ದೇಶದಿಂದ ನಿಪಿ 2 ನ್ನು ಮುಂದುವರೆಸಿಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಸಾಮಾನ್ಯವಾಗಿ ಹಣ ಮುಟ್ಟಿದ ಸಂದರ್ಭದಲ್ಲಿ ಸಾಕ್ಷಿದಾರರ ಸಮಕ್ಷಮ ನನಗೆ ಇಷ್ಟು ಹಣ ಮುಟ್ಟಿದೆ ಎಂದು ಷರಾ ಬರೆದು ಸಹಿ ಹಾಕುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 2 ನ್ನು ಮಾಡಿದಾಗ ಬ್ಯಾಂಕ್ ಮೂಲಕ ಹಣ ಕೊಡಲು ತೊಂದರೆ ಇತ್ತ ಎಂದರೆ ಸಾಕ್ಷಿ ಎ.ಸಿ. ಕಚೇರಿಯಲ್ಲಿಯ ನಿರ್ಭಂದನೆಗಳನ್ನು ತೆಗೆಸುವ ಸಲುವಾಗಿ ನನಗೆ ಹಣದ ಅವಶ್ಯಕತೆ ಇದೆ ಎಂದು ಹೇಳಿದ್ದರಿಂದ ನಾನು ನಗದು ರೂಪದಲ್ಲಿಯೇ ಹಣ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಈ ವಿಷಯವನ್ನು ನಿಪಿ 2 ರಲ್ಲಿ ಕಾಣಿಸಿದ್ದೇನೆ. ನಾನು ಬ್ಯಾಂಕ್ ಮೂಲಕ ಹಣ ಪಾವತಿ ಮಾಡುತ್ತೇನೆ ಎಂದು 1 ನೇ ಪ್ರತಿವಾದಿಗೆ ಹೇಳಿದ್ದೆ ಆದರೆ ಅವರು ನನಗೆ ನಗದು ರೂಪದಲ್ಲಿಯೇ ಕೊಡಿ ಎಂದು ಹೇಳಿದ್ದಕ್ಕೆ ನಾನು 2 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. 2 ಲಕ್ಷ ಹಣವನ್ನು ಯಾವ ಬ್ಯಾಂಕಿನಿಂದ ಬಿಡಿಸಿಕೊಂಡು ಬಂದಿದ್ದೀರಿ ಎಂದರೆ ಸಾಕ್ಷಿ 1 ಲಕ್ಷ ಹಣವನ್ನು ಎಸ್.ಬಿ.ಐ. ಬ್ಯಾಂಕಿನಿಂದ ಹಾಗೂ ಇನ್ನೊಂದು ಲಕ್ಷ ಮನೆಯಲ್ಲಿಯೇ ಇತ್ತು ಎಂದು ನುಡಿಯುತ್ತಾರೆ.

ಸಂಜೆಯ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)

ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.